# ಶ್ರೀರಾಮಕೃಷ್ಣ ಶಾರದಾಶ್ರಮ

**ಪೊನ್ನಂಪೇಟೆ –571 216, ಕೊಡಗು ಜಿಲ್ಲೆ ಫೋನ್: 08274–249040**

e-mail: srkseva@gmail.com, srksevaponnampet@gmail.com
Web: www.rkmponnampet.org


## ಆಧ್ಯಾತ್ಮಿಕ ಶಿಬಿರ

**25–10–2015 ರಿಂದ 27–10–2015**

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 6ನೇ ವಾರ್ಷಿಕೋತ್ಸವದ ಪ್ರಯುಕ್ತ, **2015 ಅಕ್ಟೋಬರ್ 25 ರಿಂದ 27 ರವರೆಗೆ,** 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಅಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ ಮತ್ತು ನಾಡಿನ ಹಲವು ಖ್ಯಾತ ವಾಗ್ಮಿಗಳು ಪ್ರವಚನಗಳನ್ನು ನೀಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

**ನೋಂದಣಿ ಶುಲ್ಕ** : *ವಸತಿ ರಹಿತ :* **ರೂ. 600/–** *ವಸತಿ ಸಹಿತ :* **ರೂ. 1000/–**

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15.10.2015**

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಯನ್ನು ಆಶ್ರಮದ ವೆಬ್‌ಸೈಟಿನಿಂದ ಕೂಡ ಪಡೆಯಬಹುದಾಗಿದೆ.)

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಭಗವತ್ಸೇವೆಯಲ್ಲಿ ತಮ್ಮ,

**ಸ್ವಾಮಿ ಬೋಧಸ್ವರೂಪಾನಂದ**

ಅಧ್ಯಕ್ಷರು


# ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ

(ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆಯ ಅಂಗಸಂಸ್ಥೆ)

## ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗ

**ಪೊನ್ನಂಪೇಟೆ – 571216**

Email: srkseva@gmail.com, srksevaponnampet@gmail.com
Web: www.rkmponnampet.org


ನಿಸರ್ಗ ಚಿಕಿತ್ಸೆ ಆಧುನಿಕ ಮಾನವನಿಗೆ ಅತ್ಯಂತ ಆವಶ್ಯಕವಿರುವ ಚಿಕಿತ್ಸಾಪದ್ಧತಿ. ರೋಗಿಯನ್ನು ದೇಹವೆಂದು ಪರಿಗಣಿಸದೆ, ಸಮಗ್ರವಾಗಿ ಪರಿಗಣಿಸಿ ಚಿಕಿತ್ಸೆ ನೀಡಿ, ನಂತರ ರೋಗ ಮರುಕಳಿಸದಂತೆ ಮಾರ್ಗದರ್ಶನ ನೀಡುವುದೇ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಚಿಕಿತ್ಸೆಗಳ ಗುರಿ. ಪ್ರಕೃತಿ ಚಿಕಿತ್ಸೆಯು ಕಾಯಿಲೆಗಳನ್ನು ಗುಣಪಡಿಸುತ್ತದೆ; ಯೋಗವು ಆರೋಗ್ಯವನ್ನು ಕಾಯ್ದುಕೊಂಡು ಹೋಗಲು ಸಹಕರಿಸುತ್ತದೆ.

**ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ , ಪೊನ್ನಂಪೇಟೆ**ಯಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಭಾಗವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಯೋಗ ಚಿಕಿತ್ಸೆ, ಜಲ ಚಿಕಿತ್ಸೆ, ಫಿಸಿಯೋಥೆರಪಿ, ಆಕ್ಯುಪಂಕ್ಚರ್, ಮಸಾಜ್ ಚಿಕಿತ್ಸೆ, ಮಣ್ಣಿನ ಚಿಕಿತ್ಸೆಗಳ ಸೇವೆಗಳು ಲಭ್ಯವಿವೆ.

ಪೊನ್ನಂಪೇಟೆಯಲ್ಲಿ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿಯ ಈ ಕೆಳಕಂಡ ಮೂರು ಶಿಬಿರಗಳನ್ನು ಆಯೋಜಿಸಲಾಗಿದೆ:

10.09.2015 ರಿಂದ 13.09.2015 ರ ವರೆಗೆ

24.09.2015 ರಿಂದ 27.09.2015 ರ ವರೆಗೆ

01.10.2015 ರಿಂದ 04.10.2015 ರ ವರೆಗೆ

ಶಿಬಿರದಲ್ಲಿ ಪಾಲ್ಗೊಳ್ಳಬಯಸುವ ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9845395293, 08274–249555, 249040

ನೋಂದಣಿ ಶುಲ್ಕ : **500 ರೂಪಾಯಿಗಳು** *(ಚಿಕಿತ್ಸಾ ಶುಲ್ಕ ಪ್ರತ್ಯೇಕ)*



ಸಂಪಾದಕೀಯ

# ಪೂರ್ಣ ಮಾನವ - ಪೂರ್ಣಾವತಾರ

### ಅನುಪಮ ವ್ಯಕ್ತಿತ್ವ

ಹಳ್ಳಿಯ ಶಾಂತ, ಸರಳ ಜೀವನ; ಹುಲ್ಲುಗಾವಲ ನಡುವೆ ಸಹಜವಾಗಿ ನದಿ ಹರಿದುಬಂದಂತೆ ಜನಸಾಮಾನ್ಯರ ಬದುಕು ಸಾಗುತ್ತಿದೆ. ಅಲ್ಲೊಬ್ಬ ಹುಡುಗ ಎಲ್ಲ ಮಕ್ಕಳಿಗೂ ಗೆಳೆಯ, ಎಲ್ಲರ ನಾಯಕ. ಹಳ್ಳಿಯ ತಾಯಂದರಿಗೂ, ಯುವಕ-ಯುವತಿಯರಿಗೂ, ವೃದ್ಧರಿಗೂ ಪ್ರಿಯನು. ಅಷ್ಟೇಕೆ, ಪ್ರೀತಿಯ ಅತಿರೇಕದಲ್ಲಿ ಎಲ್ಲವನ್ನೂ ಮರೆತುಬಿಡುವರು. ಕ್ರಮೇಣ ಅವರಿಗೆ ಅರ್ಥವಾಯಿತು, ತಮ್ಮನ್ನು ಸಂತಸದ ಪ್ರವಾಹದಲ್ಲೇ ತೇಲಿಬಿಟ್ಟ ಹುಡುಗ ಸಾಮಾನ್ಯನಲ್ಲ; ಜಗತ್ತನ್ನೇ ಉದ್ಧರಿಸಲು ಅವತರಿಸಿ ಬಂದ ಭಗವಂತನೇ ಅವನು! ಹೀಗೆ ತಮ್ಮೆಲ್ಲರ ನಡುವೆ ಒಂದಾದ ಪುಟ್ಟ ಬಾಲಕ ಕೃಷ್ಣ , ಪರಾತ್ಪರ ಪುರುಷನೇ ಎಂದು ಕಂಡುಕೊಂಡ ಗೋಕುಲದ ಜನರೆಲ್ಲ ಭಗವಂತನ ಲೀಲೆಯಲ್ಲಿ ಮುಳುಗೆದ್ದು ಓಲಾಡಿದರು. ಗೋಪಿಯರು ಅಕಳಂಕ ಪ್ರೇಮದ ಹುಚ್ಚುಹೊಳೆಯಲ್ಲಿ ತಮ್ಮ ಐಹಿಕ ವ್ಯಾಪಾರವನ್ನೆಲ್ಲ ಮೀರಿ, ದಿವ್ಯತೆಯ ಶಿಖರವನ್ನೇರಿದರು. ಇಲ್ಲೊಬ್ಬ ಅಸಾಧಾರಣ ಬಾಲಕ ಬೆಳೆದ - ಅವನು ಸಾಮಾನ್ಯರ ನಡುವೆ ತಾನೂ ಸಾಮಾನ್ಯನಾದ, ಅವನೇ ಮುಂದೆ ಪ್ರಪಂಚಕ್ಕೆ ಹೊಸ ಬೆಳಕನ್ನು ಕೊಟ್ಟ ಪುರುಷೋತ್ತಮನಾದ.

ಶ್ರೀಕೃಷ್ಣನ ವ್ಯಕ್ತಿತ್ವವೇ ಅಂಥದು, ಅವನ ಜೀವನದ ಘಟನೆಗಳೂ ಅಂಥವು. ಎಂದಿಗೂ ಪರಕೀಯನಾಗದ, ಯಾರಿಗೂ 'ಅನ್ಯ' ಎನಿಸದ ಆಪ್ಯಾಯಮಾನ ಸ್ವಭಾವ ಅವನದು. ಜನರಿಂದ ದೂರವಾಗಿ ಜೀವನವೆಲ್ಲ ಅವನು ಎಂಥವರೊಡನೆಯೂ ಬೆರೆತು, ಎಲ್ಲ ಬಗೆಯ ಜನರ ನಡುವೆಯೂ ಓಡಾಡಿ, ಅವರ ಕಷ್ಟ-ಸುಖಗಳಲ್ಲಿ ಒಂದಾದ. ಅನೇಕ ದುರ್ಘಟನೆಗಳು, ಗಂಡಾಂತರಗಳು ಒದಗಿ ಬಂದಾಗ ಅವನು ಸಾವಿನ ಭಯವನ್ನು ಲೆಕ್ಕಿಸದೆ ಮುನ್ನುಗಿದ, 'ತನ್ನವ'ರನ್ನು ರಕ್ಷಿಸಿದ. ಹಾಗೆ ನೋಡಿದರೆ ಎಲ್ಲರೂ ತನ್ನವರೇ; ಎಲ್ಲಿಗೆ ಹೋದರೂ ಅಲ್ಲಿನ ಜನ ತನಗೆ ಆತ್ಮೀಯರೇ. ಕೃಷ್ಣ ಎತ್ತರದ ವ್ಯಕ್ತಿಯಾಗುವುದು ಈ ಗುಣದಿಂದ - ಪ್ರತಿಯೊಂದು ಜೀವಿಯ ಹಂತಕ್ಕೆ ಇಳಿದು ಬಂದು ಅವರನ್ನು ಮೇಲಕ್ಕೆತ್ತುವುದರಿಂದ. ಮನುಷ್ಯ ಜಾತಿಯಷ್ಟೇ ಅಲ್ಲ, ಪಶುಪಕ್ಷಿ ಪ್ರಾಣಿಗಳೂ ಅವನ ಅಸೀಮ ಪ್ರೇಮದಲ್ಲಿ ಮೈ-ಮನ ತೊಯ್ಯಿಸಿದವು.

### ಐತಿಹಾಸಿಕ ದಾಖಲೆಗಳ ಸಂಕಲೆಯಾಚೆ

ಜೀವನದ ಪ್ರತಿಯೊಂದು ಆಗುಹೋಗುಗಳನ್ನು ಜಗತ್ತಿನ ಎಲ್ಲ ವ್ಯಾಪಾರ-ವಹಿವಾಟುಗಳನ್ನು ದಾಖಲಿಸುವ, ಹಾಗೆ ದಾಖಲಿಸಿದ್ದನ್ನು 'ಇತಿಹಾಸ'ವೆಂದು, ಸತ್ಯಸಂಗತಿಯೆಂದು ನಂಬುವ ಶಾಸ್ತ್ರವಾಗಿ ಚರಿತ್ರೆ ಬೆಳೆದು ಬಂತು. ವೈಜ್ಞಾನಿಕ ವಿಧಾನ, ವಿಶ್ಲೇಷಣೆ-ವಿಮರ್ಶೆಗಳ ಒರಗಲ್ಲು ಮುಂತಾದ ಕ್ರಮಗಳಿಂದ ಇತಿಹಾಸವನ್ನು ಕಟ್ಟುವ, ಸತ್ಯವೆಂದು ಕಂಡುಬರದ್ದನ್ನು ಅಲ್ಲಗಳೆಯುವ ಈ ಅಧ್ಯಯನ ಶಾಖೆ ನಮಗೆ ಬಳುವಳಿಯಾಗಿ ಬಂದದ್ದು ಬ್ರಿಟಿಷರಿಂದ. ವೈಜ್ಞಾನಿಕ ವಿಧಾನದಲ್ಲಿ ಇತಿಹಾಸವನ್ನು ಕಲಿಯುವ ವಿಧಾನ ನಮಗೆ ಹೊಸತಾಗಿ ಬಂತು ನಿಜ; ಆದರೆ ಅದರೊಂದಿಗೆ ದಾಖಲೆ

ಯಿಲ್ಲದ ಎಲ್ಲವನ್ನೂ ತಿರಸ್ಕರಿಸುವ 'ಆಧುನಿಕ ಮೌಢ್ಯ' ವೂ ಭಾರತೀಯ ಮನಸ್ಸನ್ನು ಕವಿಯತೊಡಗಿತು. ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವ, ಜೀವನ ಮತ್ತು ಸಿದ್ಧಾಂತಗಳನ್ನು ವಿಶ್ಲೇಷಿಸಿದ ಬಹುಪಾಲು ಮಂದಿ ವಿದ್ವಾಂಸರು ಪಾಶ್ಚಾತ್ಯ ಚಿಂತನೆಯ, ನಾಸ್ತಿಕವಾದಿಗಳ ವಿಡಂಬನಾತ್ಮಕ ವಿಶ್ಲೇಷಣೆಗಳಿಂದ ಪೀಡಿತರಾದವರೆ. ಆಧುನಿಕ ವಿಧಾನಗಳಿಂದ, ವೈಜ್ಞಾನಿಕ ಕ್ರಮಗಳಿಂದ ಇತಿಹಾಸ, ತತ್ತ್ವ, ಧರ್ಮ ಇವುಗಳನ್ನು ಅಧ್ಯಯನ ಮಾಡಿಯೂ ದಿವ್ಯ ವ್ಯಕ್ತಿತ್ವಗಳ, ಅವತಾರಪುರುಷರ, ಭಾರತೀಯ ತತ್ತ್ವಗಳ ಅಸಾಧಾರಣತೆಯನ್ನು ಗುರುತಿಸಿ, ಎತ್ತಿ ಹಿಡಿದ ವಿದ್ವಾಂಸರೂ ನಮ್ಮಲ್ಲಿ ಹಲವರಿದ್ದಾರೆ. 'ಆಧುನಿಕ ಮೌಢ್ಯ'ಕ್ಕೆ ಸೂಕ್ತ ಉತ್ತರ ನೀಡಿ, ವಸ್ತುನಿಷ್ಠವಾದ, ನಮ್ಮ ಪರಂಪರೆಗೆ ಸೂಕ್ತವಾದ ಆರೋಗ್ಯಕರ ದೃಷ್ಟಿಕೋನವನ್ನು ನೀಡಿದವರು ಇವರು. ಗಾಂಧಿ, ತಿಲಕ್, ವಿನೋಬಾ, ಸ್ವಾಮಿ ವಿವೇಕಾನಂದ, ಅರವಿಂದರೇ ಮೊದಲಾದವರಿಂದ ಈ ಬಗೆಯ ಪ್ರಯತ್ನ ನಡೆಯಿತು. ಇವರಿಗೆಲ್ಲ ಆಧ್ಯಾತ್ಮಿಕ ಹಿನ್ನಲೆಯ ಬೆನ್ನೆಲುಬು ಇತ್ತೆನ್ನುವುದು ಗಮನಾರ್ಹವಾದ ಅಂಶ.

ಶ್ರೀಕೃಷ್ಣ ನಿಜವಾಗಿಯೂ ಬದುಕಿದ್ದ ವ್ಯಕ್ತಿಯೆಂಬುದನ್ನು ಐತಿಹಾಸಿಕವಾಗಿಯೂ ಸ್ವೀಕರಿಸಲಾಗಿದೆ. ಅವನ ಜೀವನದಲ್ಲಿ ಬರುವ ಅನೇಕ 'ಅನೈತಿಕ' ಅಂಶಗಳು, ಅತಿಮಾನುಷ ಘಟನೆಗಳು ಅವನ ವ್ಯಕ್ತಿತ್ವಕ್ಕೆ ಕಳಂಕ ತರುತ್ತವೆ ಎಂಬ ಕೆಲವು ವಾದಗಳಿಗೆ ಅವನ ದಿವ್ಯಜೀವನವೇ ಉತ್ತರ ನೀಡುತ್ತದೆ. ಚೋರ, ಜಾರ ಸ್ವಭಾವ ಶ್ರೀಕೃಷ್ಣದು ಎಂದು ಹಳಿಯುವ ಮಂದಿ ಕೇವಲ ಮತಾಂಧತೆಯ, ನಾಸ್ತಿಕತೆಯ ಮನೋಭಾವದವರು ಮಾತ್ರ; ಶ್ರೀಕೃಷ್ಣನ ಕಥೆಯನ್ನು ಹೇಳುವ ಸಾಹಿತ್ಯದಲ್ಲೆಲ್ಲೂ ಅವನ ಈ ಸ್ವಭಾವ ಕಳಂಕದ್ದಾಗಿ ಕಂಡುಬರುವುದಿಲ್ಲ. ಬಾಲ್ಯದ ತುಂಟತನ, ಕಳ್ಳತನ, ಕಪಟತೆಗಳು ಅವನ ವಿನೋದದ ವ್ಯಕ್ತಿತ್ವವನ್ನು ಚಿತ್ರಿಸಿದರೆ, ಪ್ರೌಢ ಶ್ರೀಕೃಷ್ಣನ 'ಕಪಟನಾಟಕ ಸೂತ್ರಧಾರ'ನ ಸ್ವಭಾವ ಅಪಾರ ಅನುಕಂಪ, ಕರುಣೆ, ಪ್ರೀತಿಗಳಿಂದ ತುಂಬಿದ ದುಷ್ಟಶಿಕ್ಷಕ-ಶಿಷ್ಟರಕ್ಷಕನ ಮಹಿಮೆಯಷ್ಟೆ. ಅವನ ವ್ಯಕ್ತಿತ್ವದಲ್ಲೆಲ್ಲೂ ದ್ವಂದ್ವವಿಲ್ಲ; ಸತ್ಯನಿಷ್ಠೆ, ಮಾನವೀಯತೆ, ಅಸಾಮಾನ್ಯ ಕ್ರಿಯಾಶೀಲತೆ, ದಿವ್ಯ ಲೀಲಾನಾಟಕವನ್ನಾಡುವ - ಆಡಿಸುವ ಅವತಾರಪುರುಷ ಅವನು.

## ದಿವ್ಯತೆಯ ನೋಟ

ಶ್ರೀಕೃಷ್ಣ ಅಸಾಧಾರಣ ವ್ಯಕ್ತಿಯೆಂದಷ್ಟೇ ಹೇಳಿದರೆ ಅವನ ವ್ಯಕ್ತಿತ್ವವನ್ನು ಅರಿತಂತಾಗುವುದಿಲ್ಲ; 'ವ್ಯಕ್ತಿತ್ವ'ವೆಂಬ ಮಿತಿಯನ್ನು ಮೀರಿ ಅವನನ್ನು ಅರಿಯಬೇಕು, ಆಗ ಅವನು 'ಮಾನವ'ನಲ್ಲ, ದಿವ್ಯ ಮಾನವನೆಂಬುದು ಅರ್ಥವಾಗುವುದು. ನಮ್ಮ ಪರಂಪರೆಯಲ್ಲಿ ಮಾನವರೆಲ್ಲರೂ 'ಜೀವ'ವೆನಿಸಿಕೊಳ್ಳುತ್ತಾರೆ. ಹುಟ್ಟು-ಸಾವು, ಸುಖ-ದುಃಖ, ಹಾಗೂ ನೈಸರ್ಗಿಕ ನಿಯಮಗಳಿಗೆಲ್ಲ ಒಳಗಾಗುವ ಸಾಮಾನ್ಯ ವ್ಯಕ್ತಿತ್ವ ಅವರದು. ಇವನ್ನೆಲ್ಲ ಮೀರಿದ, ಪ್ರಕೃತಿಯನ್ನೇ ನಿಯಂತ್ರಿಸುವ, ಇಡೀ ಜಗತ್ತನ್ನು ಮೀರಿ ನಿಂತಿರುವ ಅಮಾನುಷ ಶಕ್ತಿಯನ್ನು ಹೊಂದಿರುವ ವ್ಯಕ್ತಿತ್ವವುಳ್ಳವನು ಕೇವಲ 'ಜೀವ'ನಲ್ಲ; ಅವನು 'ದೇವ.' ಅವನು ಜಗತ್ತನ್ನು ಮೀರಿ ನಿಂತಿರುವವನಾದರೆ (**'ಅತ್ಯತಿಷ್ಠದ್ದಶಾಂಗುಲಂ'** – 'ಈ ಲೋಕದಿಂದಾಚೆಗೂ ಹತ್ತು ಅಂಗುಲ ವ್ಯಾಪಿಸಿರುತ್ತಾನೆ' ಎನ್ನುತ್ತದೆ *ಪುರುಷಸೂಕ್ತ* ) ಈ ಜಗತ್ತಿನಲ್ಲಿ ಸಾಮಾನ್ಯರಂತೆ ದೇಹಧಾರಣೆ ಮಾಡಿ 'ಲೀಲೆ'ಯನ್ನೇಕೆ ಮಾಡಿದ? ಇದಕ್ಕೆ ಅವತಾರತತ್ತ್ವ ಸಮರ್ಪಕ ಉತ್ತರ ನೀಡುತ್ತದೆ. 'ಎಲ್ಲೆಲ್ಲಿ ಧರ್ಮವು ಕುಗ್ಗಿಹೋಗಿ ಅಧರ್ಮ ತಾಂಡವವಾಡುತ್ತದೋ, ಅಲ್ಲಿ ಮತ್ತೆ ಧರ್ಮಸ್ಥಾಪನೆ ಮಾಡಲು ಭಗವಂತ ಮಾನವ ರೂಪವನ್ನು ಧರಿಸಿ, ಧರೆಗಿಳಿದು ಬರುತ್ತಾನೆ' ಎನ್ನುತ್ತದೆ ಗೀತೆ (**'ಯದಾ ಯದಾ ಹಿ ಧರ್ಮಸ್ಯ . .'** *ಗೀತೆ, ೪.೭*). ಅವನ ನಡೆನುಡಿ, ಸ್ವಭಾವ, ಕಾರ್ಯಗಳೆಲ್ಲ ಸಾಮಾನ್ಯರಂತೆ ಕಂಡುಬಂದರೂ, ಅದರ ಹಿಂದೆ ಅಸಾಧಾರಣ ದಿವ್ಯತೆ ಕೆಲಸಮಾಡುತ್ತದೆ. ಈ ದಿವ್ಯತೆ ಕ್ರಮೇಣ ಜನಮಾನಸದಲ್ಲಿ ಅಚ್ಚೊತ್ತಿ ನಿಂತು, ಭಗವಂತನ ದಿವ್ಯ ವ್ಯಕ್ತಿತ್ವವನ್ನು ಅವರು ಅರಿತುಕೊಳ್ಳುತ್ತಾರೆ. ಹೀಗೆ ಅವರು ಮತ್ತೆ ಧಾರ್ಮಿಕರೂ, ಆಧ್ಯಾತ್ಮಿಕರೂ ಆಗುತ್ತಾರೆ; ಭಗವಂತನ ದಿವ್ಯತೆ ಅವರಿಂದಾಗಿ ಹೆಚ್ಚು ಹೆಚ್ಚು ಪ್ರಕಾಶಗೊಳ್ಳುತ್ತದೆ.

ಶ್ರೀಕೃಷ್ಣನ ದಿವ್ಯತೆ ಅವನ ಹುಟ್ಟಿನಿಂದಲೇ ಆರಂಭವಾಯಿತೆನ್ನಬೇಕು. ಕಾರಾಗೃಹದಲ್ಲಿ ಜನನ, ಆದರೆ ಮಾತಪಿತೃಗಳಿಗೆ ಅಭಯ! ನಡುರಾತ್ರಿ ಹುಟ್ಟಿದ, ಆದರೆ ಅಂಧಕಾರವನ್ನೇ ಅಟ್ಟಿದ! ಗೊಲ್ಲರ ನಡುವೆ ಗೊಲ್ಲನಾದ; ಎಲ್ಲ ದುಷ್ಟರಾಕ್ಷಸರ ದಮನಗೈದ! ಮತ್ತೆ ಇಡೀ ಗ್ರಾಮದ ಕಣ್ಗೊಂಬೆಯಾದ, ದಿವ್ಯಪ್ರೇಮದಲ್ಲಿ ಮಾತ್ರ ಎಲ್ಲರನ್ನೂ ಮೀರಿನಿಂತ! ಮುಂದೆ ಉತ್ತರಭಾರತದ ಇಡೀ ರಾಜಕರಣ ಶ್ರೀಕೃಷ್ಣನ ಕಿರುಬೆರಳಿನ ಆಟವಾಯಿತು; ಸಹಸ್ರಾರು ಮಂದಿ ಅವನ ಭಕ್ತರಾದರು, ಅನುಯಾಯಿಗಳಾದರು. ಎಲ್ಲೂ ಅವನ ತಲೆ ತಿರುಗಲಿಲ್ಲ, ಅವನು ಏನನ್ನೂ ಬಯಸಲಿಲ್ಲ. ದೇಶದ, ಜನಸಾಮಾನ್ಯರ ಹಿತಕ್ಕಾಗಿ ಯೋಗ್ಯ ರಾಜರ ರಕ್ಷಣೆಗೆ ನಿಂತ. ದುಷ್ಟರ ಪೂರ್ಣನಾಶವಾಗುವವರೆಗೂ ವಿರಮಿಸಲಿಲ್ಲ. ಲೀಲೆಯ ಅಂತ್ಯವಾಗುತ್ತಲೇ ಶ್ರೀಕೃಷ್ಣ ತನ್ನ ನಿಜವಾದ ನೆಲೆಗೆ ಮರಳಿದ.

**'ಜನ್ಮ ಕರ್ಮಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ'** –'ಯಾವನು ಹೀಗೆ ನನ್ನ ದಿವ್ಯವಾದ ಅವತಾರವನ್ನೂ ಕರ್ಮವನ್ನೂ ಯಥಾರ್ಥವಾಗಿ ತಿಳಿಯುತ್ತಾನೋ' *(ಗೀತೆ, ೪.೯)* – ಎಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳುತ್ತಾನೆ. 'ಯಥಾರ್ಥವಾಗಿ' ತಿಳಿಯುವುದೆಂದರೆ ಶ್ರೀಕೃಷ್ಣನ ಸಾಕ್ಷಾತ್ಕಾರ ಮಾಡಿಕೊಂಡಂತೆಯೇ. ಹೀಗೆ ಅವನ ವ್ಯಕ್ತಿತ್ವ ಎಲ್ಲ ಆಧ್ಯಾತ್ಮಿಕ ಸಾಧನೆಗಳ ಗಮ್ಯಸ್ಥಾನವೂ ಆಗಿದೆ; ಅವನ ವ್ಯಕ್ತಿತ್ವವೇ ತತ್ತ್ವವೂ ಆಗಿದೆ. ಆದ್ದರಿಂದಲೇ ಇರಬೇಕು, ಅವನ ಜನ್ಮ (ಅಥವಾ ಅವತಾರ) ಎಂದೇ ಆಗಿರಲಿ, ಎಲ್ಲೇ ಆಗಿರಲಿ – 'ಶ್ರೀಕೃಷ್ಣ ನಮ್ಮವನೇ' ಎಂದು ಜಗತ್ತಿನ ಎಲ್ಲರೂ ಹೇಳಿಕೊಳ್ಳಬಹುದು; ಎಲ್ಲ ಕಾಲದವರೂ ಹೇಳಿಕೊಳ್ಳಬಹುದು. ಕಾಲ,